ಇ) 1992–93ರ ಸಾಲಿನಲ್ಲಿ ಅನುದಾನವನ್ನು ನೀಡಿರುವುದಿಲ್ಲ.

ಗದಗ – ಮುಂಡರಗಿ ನಡುವೆ ಸಂಪರ್ಕ ರಸ್ತೆ

2189: ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಂಡರಗಿ ತಾಲ್ಲೂಕು ಮೇವುಂಡಿ ಹಳ್ಳಕಟ್ಟಿ ಗದಗ ಮುಂಡರಗಿ ನಡುವೆ ಸಂಪರ್ಕ ರಸ್ತೆ ಬಂದ್ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಗೆ ಬ್ರಿಡ್ಜ್ ಕಟ್ಟಲು ಎಂ.ಎಲ್.ಎ ಗ್ರಾಂಟ್ ಕೊಡಲು ನಾನು ಒಪ್ಪಿ ಬರಕೊಟ್ಟಿದ್ದರೂ ಅದರ ಕಾರ್ಯ ಪ್ರಾರಂಭವಾಗಿಲ್ಲವೇಕೆ; ಎಂದಿನಿಂದ ಕಾರ್ಯ ಪ್ರಾರಂಭಿಸುವಿರಿ; ನಿರ್ದಿಷ್ಟ ದಿನಾಂಕವನ್ನು ತಿಳಿಸುವುದು;

ಇ) ಈ ಸಲದ ಮಹಾಪೂರದಲ್ಲಿ ಮುಂಡರಗಿ ಹಾಗೂ ಗದಗ ತಾಲ್ಲೂಕಿನಲ್ಲಿ ಲೋಕೋಪಯೋಗಿ ಹಾಗೂ ಜಿಲ್ಲಾಪರಿಷತ್ ರಸ್ತೆಗಳೆಲ್ಲಾ ಪೂರ್ತಿ ನಾದುರಸ್ತಿಯಾಗಿ ಬಸ್ ಸಂಚಾರಕ್ಕೆ ಅಡಚಣೆಯಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಗಮನಕ್ಕೆ ಬಂದಿದ್ದರೆ ಸರ್ಕಾರಕ್ಕೆ ಈ ಕುರಿತು ಸಲ್ಲಿಸಿದ ಮನವಿಯ ಬಗ್ಗೆ ಬಿಡುಗಡೆ ಮಾಡುವ ಹಣವೆಷ್ಟು ? ಯಾವಾಗ ಬಿಡುಗಡೆ ಮಾಡುವುದು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ರಸ್ತೆಯ ಬಂದ್ ಆಗಿರುವುದಿಲ್ಲ.

ಆ) ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 20 ಲಕ್ಷ ರೂ.ಗಳ ಅಂದಾಜಿನಲ್ಲಿ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿ ಕಾರ್ಯಕ್ರಮವನ್ನು 93–94ರ ಸಾಲಿನಿಂದ ಕೈಗೊಳ್ಳಲು ಪ್ರಸ್ತಾಪಿಸಿಲಾಗಿದೆ.

ಇ) ಈ ತಾಲ್ಲೂಕುಗಳಲ್ಲಿ ರಸ್ತೆ ಮತ್ತು ಸೇತುವೆಗಳಿಗೆ ಇತ್ತೀಚಿನ ಅತಿವೃಷ್ಟಿಯಿಂದ ಒಟ್ಟು 89.68 ಲಕ್ಷ ರೂ. ಗಳ ಹಾನಿ ಉಂಟಾಗಿದೆ.

ಈ) ಅತಿ ತುರ್ತಾಗಿ ಆಗಬೇಕಿದ್ದ ದುರಸ್ತಿಗಳನ್ನು 7.04 ಲಕ್ಷ ರೂ.ಗಳಲ್ಲಿ ಮಾಡಿದ್ದು ಸಂಚಾರಕ್ಕೆ ಅಡಚಣೆ ಆಗದಂತೆ ನೋಡಿಕೊಳ್ಳಲಾಗಿದೆ. ಕಂದಾಯ ಇಲಾಖೆಯವರಿಂದ ಅತಿವೃಷ್ಟಿ ಪರಿಹಾರ ಅನುದಾನಕ್ಕೆ ಬೇಡಿಕೆ ಸಲ್ಲಿಸಿದ್ದು ಅನುದಾನ ಬಂದ ನಂತರ ವ್ಯಾಪಕ ದುರಸ್ತಿಯನ್ನು ತೆಗೆದುಕೊಳ್ಳಲಾಗುವುದು.

ಮುಂಡರಗಿ ತಾಲ್ಲೂಕಿನಲ್ಲಿ ಏತ ನೀರಾವರಿ ಪ್ರಾರಂಭಿಸುವ ಬಗ್ಗೆ

2190: ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಸಿಂಗಟಾಲೂರ ಏತ ನೀರಾವರಿ ಎರಡನೇ ಹಂತವನ್ನು ಎಂದಿನಿಂದ ಪ್ರಾರಂಭ ಮಾಡುವಿರಿ;